

ಅಡುಗೆಮನೆ ಅಥವಾ ಹಿತ್ತಿಲು. ಕುವೆಂಪು ಇದನ್ನು ತಮ್ಮ ಕಾದಂಬರಿಗಳಲ್ಲಿ ಎಷ್ಟೊಂದು ಚೆನ್ನಾಗಿ ಹಿಡಿಯುತ್ತಾರೆಂದರೆ, ಹೆಂಗಸರ ಅಡುಗೆಕೋಣೆ ಹಾಗು ಹಿತ್ತಿಲುಗಳ ವರ್ಣನೆಗೆ ಪುಟಗಳನ್ನೇ ಮೀಸಲಿಡುತ್ತಾರೆ. ನಮ್ಮ ಸುಬ್ಬಮ್ಮನಾದರೂ ತನ್ನ ಪ್ರತಾಪ ತೋರಿಸಬಹುದಾದದ್ದು ಅಡುಗೆಕೋಣೆಯಲ್ಲಿ ತಾನೆ? ಆಕೆಗೆ ತನಗೇನೊ ಅಧಿಕಾರ ಸಿಕ್ಕಿದೆ ಎನ್ನುವುದು ಗೊತ್ತಿದೆ. ಆದರೆ ಆ ಅಧಿಕಾರ ಏನಕ್ಕೂ ಉಪಯೋಗವಿಲ್ಲದ ಬರಡು ಅಧಿಕಾರದಂತೆ ಆಕೆಗೆ ತೋರಿದೆ. ಏಕೆಂದರೆ, ಚಂದ್ರಯ್ಯ ಹೆಗ್ಗಡೆಯವರಿಗೆ ಸುಬ್ಬಮ್ಮ ಮದುವೆ ಮಾಡಿಕೊಂಡು ಬಂದ ಹೆಂಡತಿಯಾದರೂ ಅವರ ಇತರೆ 'ಮಂಚದ ಅನುಕೂಲ'ಗಳಂತೆಯೇ ಇರುವ ಮತ್ತೊಂದು ಹೆಣ್ಣು. ಅವರ ಮನೆಯಲ್ಲಿರಲು ಒಂದು ಗೌಡಜಾತಿಯದೇ ಹೆಣ್ಣು ಬೇಕಾದ್ದರಿಂದ ಸುಬ್ಬಮ್ಮನನ್ನು ಕರೆದುಕೊಂಡು ಬಂದಂತೆ ಅವರ ವರ್ತನೆ ಇದೆ. ಸದಾ ಹೊಡೆಯುವ ಗಂಡನಿಂದ ಸುಬ್ಬಮ್ಮ ಪ್ರೀತಿಯನ್ನು ನಿರೀಕ್ಷಿಸುವಂತೇನೂ ಇರಲಿಲ್ಲ. ಅದು ಆಕೆಯ ಒಳಮನಸ್ಸಿಗೂ ಗೊತ್ತಿದೆ. ಹಾಗೆಂದೇ ಆ ಹತಾಶೆ, ಸೇಡುಗಳನ್ನು ಆಕೆ ತನ್ನ 'ಹೆಗ್ಗಡತಮ್ಮನ' ಅಧಿಕಾರ ಚಲಾಯಿಸುವುದರಲ್ಲಿ ಹಾಯಿಸಿ, ತೃಪ್ತಿ ಪಡೆದುಕೊಳ್ಳುತ್ತಾಳೆ. ಅಡುಗೆಕೋಣೆಯೆಂಬ ರಣರಂಗದಲ್ಲಿ ತನ್ನ ಅಸ್ತಿತ್ವಕ್ಕಾಗಿ ಸುಬ್ಬಮ್ಮ ಹೋರಾಡುತ್ತಾಳೆ. ತನಗೆ ಪ್ರತಿಸ್ಪರ್ಧಿ ಎನ್ನಿಸುವ ಹೂವಯ್ಯನ ತಾಯಿ ನಾಗಮ್ಮನವರೊಂದಿಗೆ ಕಿತ್ತಾಟ ಮಾಡುತ್ತಾಳೆ. ತನ್ನ ಗಂಡನ ಮೊದಲ ಪತ್ನಿಯರ ಮಕ್ಕಳಾದ ವಾಸು, ಪುಟ್ಟಮ್ಮ ಇವರೊಡನೆ ತನ್ನ ಅಧಿಕಾರ ಸ್ಥಾಪಿಸುವುದಕ್ಕಾಗಿ ಕಿತ್ತಾಡುತ್ತಾ ಇರುತ್ತಾಳೆ. ಹೇಗಾದರೂ ಮಾಡಿ ಅಡುಗೆಕೋಣೆಯ ಅಧಿಕಾರ ಹಿಡಿಯಲು– ಸುಬ್ಬಮ್ಮ ಆಶಿಸುವುದು– ತನ್ನ ಅಧಿಕಾರ, ಅಸ್ತಿತ್ವಗಳನ್ನು ಸ್ಥಾಪಿಸಲೆಂದೇ. ಮೇಲ್ನೋಟಕ್ಕೆ ಈ ಜಗಳಗಳು ಕ್ಷುಲ್ಲಕವಾಗಿ ಕಾಣುತ್ತಿದ್ದರೂ ಅವು ಸುಬ್ಬಮ್ಮ ಹಾಗೂ ಇತರೆ ಹೆಂಗಸರ ಪಾಲಿಗೆ ಅಸ್ತಿತ್ವದ ಮಹಾಸಮರಗಳೇ ಆಗಿದ್ದವು ಎನ್ನುವುದು ಮುಖ್ಯ. ಅಡುಗೆಕೋಣೆ ಎನ್ನುವುದು ಮಾತಿನ ಕೋಣೆ ಹೇಗೊ ಹಾಗೆಯೇ ಅದು ಮೌನದ ಮುನಿಸಿನ ಕೋಣೆಯೂ ಹೌದು. ಸುಬ್ಬಮ್ಮ ಸಿಟ್ಟಿನಲ್ಲಿ ಎತ್ತಿ ಕುಕ್ಕಿದ ಗಡಿಗೆ ಬಿರುಕು ಬಿಟ್ಟು ಒಳಗಿನ ಪದಾರ್ಥದ ರಸವೆಲ್ಲ ಸೋರಿ ಹೋಗುವಾಗ ಅದೊಂದು ಮನೆ ಒಡೆಯುವ ರೂಪಕವೇ ಆಗಿಬಿಟ್ಟು ಕಾದಂಬರಿಗೆ ಒಂದು ಬಲ ಕೊಡುತ್ತದೆ.

ಚಂದ್ರಯ್ಯಗೌಡರು ಮೂರನೇ ಮದುವೆಯಾಗುವ ಹೆಣ್ಣು ಸುಬ್ಬಮ್ಮ. ಯೌವನಸ್ಥೆಯಾದ ಸುಬ್ಬಮ್ಮನಿಗೆ ಮಧ್ಯಮಯಸ್ಸು ಮೀರುತ್ತಿರುವ ಗಂಡಿನ ಜೊತೆ ಸಂಸಾರ ಮಾಡಬಹುದೇ ಎಂದು ಯಾರೂ ಕೇಳುವುದಿಲ್ಲ. ಆ ಕಾಲದ ಸಾಮಾಜಿಕ ರೂಢಿಯಂತೆ ಆಕೆ ಅದನ್ನು ಒಪ್ಪಿಕೊಂಡೂ ಬಿಡುತ್ತಾಳೆ. ಆಕೆಗೆ ಅಶನ ವಸನಗಳನ್ನು ಪೂರೈಸಬಲ್ಲ ಒಂದು ಬಲವಾದ ಆಶ್ರಯ ಕಾನೂರಿನ ಮನೆ. ಆದರೆ ತನ್ನ ದೇಹದ ಯೌವನದ ವಾಂಛೆಗಳನ್ನು ಪೂರೈಸುವುದು ಅಲ್ಲಿ ಸಾಧ್ಯವಿಲ್ಲ. ಹೀಗಾಗಿ ಸುಬ್ಬಮ್ಮ ತನ್ನ ದೇಹದ ಆಸೆ ಪೂರೈಕೆಗಾಗಿ ಅಡ್ಡದಾರಿ ಹಿಡಿಯಬೇಕಾಗುತ್ತದೆ. ಇದು ಅನೈತಿಕ ಎಂದು ಆಲೋಚಿಸುವ ವ್ಯಕ್ತಿತ್ವವೇ ಸುಬ್ಬಮ್ಮನಿಗೆ ಇಲ್ಲ. ಮೊದಲೇ ಕೀಳುವರ್ಗದಿಂದ ಕಾನೂರಿನ ಮನೆಗೆ ಕಾಲಿಟ್ಟಿದ್ದ ಸುಬ್ಬಮ್ಮನಿಗೆ ಪ್ರಾಣಿಸಹಜವಾದ ಕಾಮವಾಂಛೆಯ ಪೂರೈಕೆ ಮಾತ್ರವೇ ಮುಖ್ಯವಾಗಿದೆ ಎನ್ನುವ ಹಾಗೆ ಕಾದಂಬರಿಯಲ್ಲಿ ಬಿಂಬಿತವಾಗಿದೆ. ಎಲ್ಲಕ್ಕೂ ಮಿಗಿಲಾಗಿ ಸುಬ್ಬಮ್ಮನ ಅವಸಾನವನ್ನು ಸೂಚಿಸುವ ಆಕೆಯ ಗರ್ಭಪಾತವು ಕರುಣಾಜನಕವಾಗಿದೆ. ಆಕೆ ಒಂದು ಹೆಣ್ಣು ಎಂದು ಯಾರೂ ಪರಿಗಣಿಸಿಲ್ಲ; ಮನೆಯ ಹೆಂಗಸರೂ ಹೆಣ್ತನಗಳ ಗುಣಲಕ್ಷಣಗಳಿಗೆ ಹೊರತಾದವಳೆಂದು ಆಕೆಯನ್ನು ದೂರವಿಟ್ಟಿದ್ದಾರೆ. ಇಂತಹ ಸಂದರ್ಭದಲ್ಲಿ ಸುಬ್ಬಮ್ಮನಿಗೆ ಪ್ರಕೃತಿ ಉತ್ತರ ಕೊಡುತ್ತದೆ; ನೀನೊಂದು ಹೆಣ್ಣು ಎಂದು. ಕಳ್ಳಬಸಿರಿನ ಸಂಕಟದಿಂದ ಪಾರಾಗಲೆಂದು ತೆಗೆದುಕೊಂಡ ನಾಟಿ ಔಷಧಿ ಸುಬ್ಬಮ್ಮನ ಜೀವವನ್ನೇ ತೆಗೆಯುತ್ತದೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಮಗುವಿನ ಕಳೇಬರವು ಸುಬ್ಬಮ್ಮನ ಮುರುಟಿಹೋದ ಬದುಕಿನ ಸ್ಥಿತಿಯ ಸಂಕೇತವಾಗಿ ಕಾಣುತ್ತದೆ. ಸುಬ್ಬಮ್ಮನ ಈ ಕೃತ್ಯವು ಅವಳನ್ನು ಇನ್ನಷ್ಟು ಅಧೋಗತಿಗೆ ತಳ್ಳುತ್ತದೆ. ವರ್ಗಗರ್ವದ ಮುಂದೆ ಸುಬ್ಬಮ್ಮ ಸದಾ ಸೋಲನ್ನು ಅನುಭವಿಸಬೇಕಾಗುತ್ತದೆ.

ಸುಬ್ಬಮ್ಮನ ಪಾತ್ರದ ಜೊತೆ ಹುಟ್ಟುವ ಸಂಸ್ಕೃತಿಯ